ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ

ಅಪರಾಧಿಕ ಪ್ರಕರಣ ಸಂಖ್ಯೆಃ-525/2017

ಇವರೊಳಗೆಃ

ಕರ್ನಾಟಕ ಸರ್ಕಾರದ ಪರವಾಗಿ ಕರ್ನಾಟಕ ಅರಣ್ಯ ಇಲಾಖೆ ....... ಪಿರ್ಯಾದಿ

ಮತ್ತು

ಶ್ರೀನಿವಾಸ ಮತ್ತು ಇತರರು ........ಆರೋಪಿತರು

**ದೋಷಾರೋಪಣೆ**

ಶುಭಾ ,ಬಿ.ಎ.ಎಲ್, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಪಟ್ಟಣ.

1. ಶ್ರೀನಿವಾಸ ಬಿನ್ ಗೋವಿಂದೇಗೌಡ,**(Abated)**
   ವಯಸ್ಸು 32 ವರ್ಷ,
   ಕೊಂಡಾಪುರ, ಚನ್ನಪಟ್ಟಣ ತಾಲ್ಲೂಕು.

2. ಬಸವರಾಜು ಬಿನ್ ಕೃಷ್ಣೇಗೌಡ,
   ವಯಸ್ಸು 29 ವರ್ಷ,
   ವಾಸಃ ಕೆಬ್ಬನಹಳ್ಳಿ, ಮಂಡ್ಯ ಜಿಲ್ಲೆ.

3. ಉಮೇಶ್ @ ಪಾಪು ಬಿನ್ ತಮ್ಮಣ್ಣ,
   ಚನ್ನಪಟ್ಟಣ ತಾಲ್ಲೂಕು.

4. ಸುದರ್ಶನ ಬಿನ್ ತಮ್ಮಣ್ಣ ,

5. ಅಸ್ಲಂ.

   ಆರೋಪಿಗಳಾದ 4,5 ರವರ ವಾಸಃ ವಾಸಃ
   ಕೋಡಂಬಳ್ಳಿ ಗ್ರಾಮ, ಚನ್ನಪಟ್ಟಣ ತಾ.

6. ಮುಷ್ರಫ್
   ವಾಸಃ ಮಂಗಾಡಹಳ್ಳಿ, ವಿರುಪಾಕ್ಷಿಪುರ ಹೋಬಳಿ,
   ಚನ್ನಪಟ್ಟಣ ತಾ.

<u>**ದೋಷಾರೋಪಣೆ**</u>

ದಿನಾಂಕ 05.05.2009 ರಂದು ಚನ್ನಪಟ್ಟಣ-ಹಲಗೂರು ರಸ್ತೆಯಲ್ಲಿನ ಹೊಂಗನೂರು ಕಡೆಯಿಂದ ಬರುವ ರಸ್ತೆಯಲ್ಲಿ ಚೌಡೇಶ್ವರಿನಗರದ ಹೆಚ್.ಪಿ.ಪೆಟ್ರೋಲ್ ಬಂಕ್ ಬಳಿ ಸತ್ಯನಾರಾಯಣ, ವಲಯ ಅರಣ್ಯಾಧಿಕಾರಿ, ಬನ್ನೇರುಘಟ್ಟ ವನ್ಯಜೀವಿ ವಲಯ, ಬಿ.ವಿ.ಚಂದ್ರಶೇಖರ, ವನಪಾಲಕ, ಬನ್ನೇರುಘಟ್ಟ ವನ್ಯಜೀವಿ ವಲಯ ಮತ್ತು ಶಿವಪ್ಪ ಅರಣ್ಯ ರಕ್ಷಕ, ಹಾರೋಹಳ್ಳಿ ಇವರಿಗೆ ಖಚಿತ ವರ್ತಮಾನ ವರದಿ ಮೇರೆಗೆ ಸುಮಾರು ರಾತ್ರಿ 10.00 ಗಂಟೆ ಸಮಯದಲ್ಲಿ ಇಬ್ಬರು ವ್ಯಕ್ತಿಗಳನ್ನು ಹಿಡಿದು ಅವರ ಪ್ಲಾಸ್ಟಿಕ್ ಚೀಲದಲ್ಲಿದ್ದ ಆನೆಯ ಎರಡು (02) ದಂತಗಳನ್ನು ವಶಪಡಿಸಿಕೊಂಡಿದ್ದು ಉಳಿದ ನಾಲ್ಕು (04) ಆರೋಪಿತರು ತಪ್ಪಿಸಿಕೊಂಡಿರುತ್ತಾರೆ. ಬಂಧಿತರಾದ ಎ 1 ಮತ್ತು ಎ 2 ಅಪಾಧಿತರಾಗಿದ್ದು, ಮೊದಲನೇ ಆರೋಪಿಯಾದ ನೀವು ಹೇಳಿಕೆ ನೀಡಿದ್ದು, ಉಮೇಶ್ @ ಪಾಪು ಬಿನ್ ತಮ್ಮಣ್ಣ, ಕೋಂಡಾಪುರ ಗ್ರಾಮ ಇವರ ಮನೆಯಲ್ಲಿ ಕೆಲಸ ಮಾಡುತ್ತಿದ್ದು, ದಿನಾಂಕಃ05.05.2009 ರಂದು ಅವರ ಮನೆಗೆ ಊಟಕ್ಕೆ ಹೋದಾಗ ಉಮೇಶ್ ಆನೆ ದಂತವನ್ನು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟು, ಅವರ ಅಣ್ಣ ಸುದರ್ಶನ್ ಜೊತೆಯಲ್ಲಿ ಟಿ.ವಿ.ಎಸ್ ಬೈಕ್ ನ ಮುಂಖಾತರ ಚೌಡೇಶ್ವರಿನಗರದ ಹೆಚ್.ಪಿ.ಪೆಟ್ರೋಲ್ ಬಂಕ್ ಬಳಿ ಕಳುಹಿಸಿರುವುದನ್ನು ಮತ್ತು ದಂತವನ್ನು ಇಟ್ಟುಕೊಂಡಿರುವುದನ್ನು ಒಪ್ಪಿಕೊಂಡಿದ್ದು, ಹಾಗೂ ಅಧಿಕಾರಿಗಳು ದಂತ ಸಮೇತ ಬಂಧಿಸಿರುವುದನ್ನು ಒಪ್ಪಿದ್ದು.

ಮುಂದುವರೆದು, ಎ 2 ಆರೋಪಿಯಾದ ನೀವು ಕೂಡ ಹೇಳಿಕೆಯನ್ನು ನೀಡಿ, ಉಮೇಶ್ @ ಪಾಪು ಬಿನ್ ತಮ್ಮಣ್ಣರವರು ಸ್ನೇಹಿತನಾಗಿದ್ದು, ಅವರ ಮನೆಗೆ ಊಟಕ್ಕೆ ಹೋಗಿದ್ದು, ಊಟದ ನಂತರ ಉಮೇಶ್ ರವರನ್ನು ನನ್ನನ್ನು ಚನ್ನಪಟ್ಟಣಕ್ಕೆ ಬಿಡಲು ಕೇಳಿಕೊಂಡಾಗ ಅವರು ನನ್ನನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಬಂದಿದ್ದು, ಆ ಸಮಯಕ್ಕೆ ಸುದರ್ಶನ್, ಶ್ರೀನಿವಾಸ್ ಮತ್ತು Santro ಕಾರಿನಲ್ಲಿ ಇನ್ನೂ ಕೆಲವರು ಆಗಮಿಸಿದರು ಆಗ ಅರಣ್ಯ ಅಧಿಕಾರಿಗಳು ದಾಳಿಮಾಡಿ ಶ್ರೀನಿವಾಸ ಹತ್ತಿರ ಇದ್ದ ಪ್ಲಾಸ್ಟಿಕ್ ಚೀಲದಲ್ಲಿದ್ದ ಆನೆ ದಂತವನ್ನು ವಶಪಡಿಸಿಕೊಂಡಿದ್ದು ಹೇಳಿಕೆ ನೀಡಿರುತ್ತಾನೆ. ಆದರೆ ಇನ್ನು ಉಳಿದ ಆರೋಪಿಗಳಾದ ನೀವುಗಳು ಉಮೇಶ್ @ ಪಾಪು ಬಿನ್ ತಮ್ಮಣ್ಣ, ಸುದರ್ಶನ್ ಬಿನ್ ತಮ್ಮಣ್ಣ ಅಸ್ಲಂ, ಸ್ಕೂಟರ್ ಗ್ಯಾರೇಜ್ ಮಾಲೀಕರು ಸೇರಿದಂತೆ ತಮ್ಮ ಹೇಳಿಕೆಯಲ್ಲಿ ಆರೋಪವನ್ನು ಅಲ್ಲಗಳಿದಿದ್ದು,

ವಿಚಾರಣಾಧಿಕಾರಿಗಳ ತನಿಖೆ, ಮಹಜರ್ ಮತ್ತು ಆರೋಪಿಗಳ ಹೇಳಿಕೆ ಪ್ರಕಾರ ದಿನಾಂಕಃ 05.05.2009 ರಂದು ಉಮೇಶ್ @ ಪಾಪು ಬಿನ್ ತಮ್ಮಣ್ಣ ರವರು ಶ್ರೀನಿವಾಸ ರವರ ಕೈಯಲ್ಲಿ ದಂತವನ್ನು ಮಾರಾಟ ಮಾಡಲು ಸುದರ್ಶನ ರವರ ಮುಖಾಂತರ ಕಳುಹಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಹಾಗೂ ಅಪರಾಧ ನಡೆದ ಸ್ಥಳಕ್ಕೆ ಎ 2 ನೇ ಆರೋಪಿಯಾದ ನೀವು ಜೊತೆ ಬಂದಿರುವುದು ಮತ್ತು ಅಲ್ಲಿ ಅರಣ್ಯಾಧಿಕಾರಿಗಳ ದಾಳಿಯಿಂದ ತಪ್ಪಿಸಿಕೊಂಡಿರುವುದು ಇಲಾಖಾ ಅಧಿಕಾರಿಗಳು ತನಿಖೆ ನಡಿಸಿದ ತನಿಖೆಯಿಂದ ಕಂಡುಬಂದಿದ್ದು, ಬಸವರಾಜು ಬಿನ್ ಕೃಷ್ಣೇಗೌಡ ಮತ್ತು ಅಸ್ಲಂ ಮತ್ತು ಮುಷ್ರಫ್ ನೀವುಗಳು ಈ ಅರಣ್ಯ ಅಪರಾಧದಲ್ಲಿ ಭಾಗವಾಗಿರುವುದು ಕಂಡು ಬಂದಿರುತ್ತದೆ. ನೀವುಗಳು ಕರ್ನಾಟಕ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ ಕಲಂ 2,9,39,40(1),(2),44,49(A)(B),50,51 ರನ್ನು ಉಲ್ಲಂಘಿ ಸಿರುವುದು ದೃಢಪಟ್ಟಿದ್ದು ಕರ್ನಾಟಕ ವನ್ಯಜೀವಿ ಸಂರಕ್ಷಣಾ ಕಾಯ್ದೆಯಂತೆ ದಂಡನೆ ವಿಧಿಸಬೇಕೆಂದು ನಿಮ್ಮ ವಿರುದ್ದ ಈ ಮೂಲಕ ದೋಷಾರೋಪಣೆ ಮಾಡಲಾಗಿದೆ.

ಆದ್ದರಿಂದ ನೀವು ಮೇಲೆ ಹೇಳಿದ ದೋಷಾರೋಪಣೆಗಳಿಗೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

Sd/-

ದಿನಾಂಕಃ-

(ಶುಭಾ)

ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆಃ 525/17

ಪಿರ್ಯಾದಿ : ಆರೋಪಿತ

**ಕರ್ನಾಟಕ ಅರಣ್ಯ ಇಲಾಖೆ : ಎ 1. ಶ್ರೀನಿವಾಸ**

| | | |
|---|---|---|
| ಹೆಸರು | : | ಎ 1. ಶ್ರೀನಿವಾಸ |
| ತಂದೆ/ಗಂಡನ ಹೆಸರು | : | ಗೋವಿಂದೇಗೌಡ |
| ವಯಸ್ಸು | : | 32 ವರ್ಷ |
| ವಾಸ | : | ಕೊಂಡಾಪುರ, ಚನ್ನಪಟ್ಟಣ ತಾಲ್ಲೂಕು. |

**<u>ದೋಷಾರೋಪಣೆ</u>**

ಪ್ರಶ್ನೆ 1. ನಿಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ ಹೌದು

ಪ್ರಶ್ನೆ 2. ನಿಮ್ಮ ವಿರುದ್ದ ಮಾಡಲಾದ ಆರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?

ಉತ್ತರಃ ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತ್ತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕಃ

(ಶುಭಾ)

ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆಃ 525/17

ಪಿರ್ಯಾದಿ : ಆರೋಪಿತ

**ಕರ್ನಾಟಕ ಅರಣ್ಯ ಇಲಾಖೆ : ಎ 2. ಬಸವರಾಜು**

| | | |
|---|---|---|
| ಹೆಸರು | : | ಎ 2. ಬಸವರಾಜು |
| ತಂದೆ/ಗಂಡನ ಹೆಸರು | : | ಕೃಷ್ಣೇಗೌಡ |
| ವಯಸ್ಸು | : | 29 ವರ್ಷ |
| ವಾಸ | : | ಕೆಬ್ಬನಹಳ್ಳಿ, ಮಂಡ್ಯ ಜಿಲ್ಲೆ. |

**<u>ದೋಷಾರೋಪಣೆ</u>**

ಪ್ರಶ್ನೆ 1. ನಿಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ ಹೌದು

ಪ್ರಶ್ನೆ 2. ನಿಮ್ಮ ವಿರುದ್ದ ಮಾಡಲಾದ ಆರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?

ಉತ್ತರಃ ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತ್ತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕಃ

(ಶುಭಾ)

ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ: 525/17

ಪಿರ್ಯಾದಿ : ಆರೋಪಿತ

**ಕರ್ನಾಟಕ ಅರಣ್ಯ ಇಲಾಖೆ : ಎ 3. ಉಮೇಶ್ @ ಪಾಪು**

| | | |
|---|---|---|
| ಹೆಸರು | : | ಎ 3. **ಉಮೇಶ್ @ ಪಾಪು** |
| ತಂದೆ/ಗಂಡನ ಹೆಸರು | : | ತಮ್ಮಣ್ಣ |
| ವಯಸ್ಸು | : | ವರ್ಷ |
| ವಾಸ | : | ಚನ್ನಪಟ್ಟಣ ತಾಲ್ಲೂಕು. |

**ದೋಷಾರೋಪಣೆ**

ಪ್ರಶ್ನೆ 1. ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರ: ಹೌದು

ಪ್ರಶ್ನೆ 2. ನಿಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?

ಉತ್ತರ: ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತ್ತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕ: (ಶುಭಾ)

ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ: 525/17

ಪಿರ್ಯಾದಿ : ಆರೋಪಿತ

**ಕರ್ನಾಟಕ ಅರಣ್ಯ ಇಲಾಖೆ : ಎ 4. ಸುದರ್ಶನ**

| | | |
|---|---|---|
| ಹೆಸರು | : | ಎ 4. ಸುದರ್ಶನ |
| ತಂದೆ/ಗಂಡನ ಹೆಸರು | : | ತಮ್ಮಣ್ಣ |
| ವಯಸ್ಸು | : | ವರ್ಷ |
| ವಾಸ | : | ಕೋಡಂಬಳ್ಳಿ ಗ್ರಾಮ, ಚನ್ನಪಟ್ಟಣ ತಾಲ್ಲೂಕು. |

**ದೋಷಾರೋಪಣೆ**

ಪ್ರಶ್ನೆ 1. ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರ: ಹೌದು

ಪ್ರಶ್ನೆ 2. ನಿಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?

ಉತ್ತರ: ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತ್ತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕ: (ಶುಭಾ)

ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ: 525/17

ಪಿರ್ಯಾದಿ : ಆರೋಪಿತ

ಕರ್ನಾಟಕ ಅರಣ್ಯ ಇಲಾಖೆ : ಎ 5. ಅಸ್ಲಂ

ಹೆಸರು : ಎ 5. ಅಸ್ಲಂ
ತಂದೆ/ಗಂಡನ ಹೆಸರು :
ವಯಸ್ಸು : ವರ್ಷ
ವಾಸ : ಕೋಡಂಬಳ್ಳಿ ಗ್ರಾಮ, ಚನ್ನಪಟ್ಟಣ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1. ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರ: ಹೌದು

ಪ್ರಶ್ನೆ 2. ನಿಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?
ಉತ್ತರ: ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತ್ತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕ: (ಶುಭಾ)
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ: 525/17

ಪಿರ್ಯಾದಿ : ಆರೋಪಿತ

ಕರ್ನಾಟಕ ಅರಣ್ಯ ಇಲಾಖೆ : ಎ 6. ಮುಷ್ರಫ್

ಹೆಸರು : ಎ 6. ಮುಷ್ರಫ್
ತಂದೆ/ಗಂಡನ ಹೆಸರು :
ವಯಸ್ಸು : ವರ್ಷ
ವಾಸ : ಮಂಗಾಡಹಳ್ಳಿ, ವಿ.ಪಾ.ಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1. ನಿಮ್ಮ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರ: ಹೌದು

ಪ್ರಶ್ನೆ 2. ನಿಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?
ಉತ್ತರ: ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತ್ತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕ: (ಶುಭಾ)
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ